ಅಕ್ಷತಾ ಹುಂಚದಕಟ್ಟೆ

## ಕವಯಿತ್ರಿ ಸವಿತಾ ನಾಗಭೂಷಣ ಸಂದರ್ಶನ

# ಕವಿತೆ: ಒಂದು ಹಣತೆಯಿಂದ ಇನ್ನೊಂದು ಹಣತೆಯನ್ನು ಬೆಳಗಿದಂತೆ

ಸವಿತಾ ನಾಗಭೂಷಣ ಕನ್ನಡದ ಮೆಲುದನಿಯ, ವಿಶಿಷ್ಟ ಸಂವೇದನೆಯ ಕವಯಿತ್ರಿ. 'ಜಾತ್ರೆಯಲ್ಲಿ ಶಿವ' ಎಂಬ ಅನನ್ಯ ಕವನವನ್ನು ಕನ್ನಡ ಕಾವ್ಯಲೋಕಕ್ಕೆ ಕೊಟ್ಟ ಅವರು ತಮ್ಮ ಕವಿತೆ ಕಟ್ಟುವ ಕುಶಲ ಕಸುಬುದಾರಿಕೆಯಿಂದಲೇ ಕನ್ನಡ ವಾಚಕರನ್ನು ಸೆಳೆದವರು. ಅಬ್ಬರವಿಲ್ಲದ ಅವರ ಕಾವ್ಯ ಹರಿವ ಹೊಳೆಯಂತೆ ಗಂಭೀರವಾಗಿ, ತನ್ನದೇ ಲಯದಲ್ಲಿ ಹರಿಯುತ್ತ ಬಂದಿದೆ. ಅದಕ್ಕೆ ಅದರದೇ ಆದ ಆಳ, ವಿಸ್ತಾರವಿದೆ. ಕನ್ನಡ ಓದುಗರ ಅತ್ಯಂತ ಪ್ರಿಯ ಕವಿಗಳಲ್ಲಿ ಒಬ್ಬರು ಸವಿತಾ. 'ನಾ ಬರುತ್ತೇನೆ ಕೇಳು', 'ಹೊಳೆಮಗಳು', 'ಚಂದ್ರನನ್ನು ಕರೆಯಿರಿ ಭೂಮಿಗೆ', 'ದರುಶನ', 'ಕರುಣಾಳು', 'ಆಕಾಶಮಲ್ಲಿಗೆ', 'ಕಾಡುಲಿಲ್ಲಿ ಹೂಗಳು'– ಕವನ ಸಂಕಲನಗಳನ್ನು, 'ಸ್ತ್ರೀಲೋಕ'– ಕಾದಂಬರಿಯನ್ನು, 'ಹೂ ಮನಸಿನ ಹೋರಾಟಗಾರ ಮತ್ತು ಇತರ ಲೇಖನಗಳು'– ಲೇಖನ ಸಂಗ್ರಹವನ್ನು ಪ್ರಕಟಿಸಿದ್ದಾರೆ.
ಚಿಕ್ಕಮಗಳೂರಿನಲ್ಲಿ ಹುಟ್ಟಿ, ಶಿವಮೊಗ್ಗದಲ್ಲಿ ವಿದ್ಯಾಭ್ಯಾಸ ಪಡೆದು, ಅಂಚೆ ಕಚೇರಿಯಲ್ಲಿ 20 ವರ್ಷಗಳ ಸೇವೆಯ ಬಳಿಕ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಪತಿ ಡಿ.ಎಸ್. ನಾಗಭೂಷಣ ಅವರ ಜೊತೆಗೆ 'ಹೊಸ ಮನುಷ್ಯ' ಪತ್ರಿಕೆಯನ್ನು ಸಂಪಾದಿಸುತ್ತಿದ್ದಾರೆ. ಪ್ರಸ್ತುತ ಶಿವಮೊಗ್ಗದಲ್ಲಿ ವಾಸ. ಅವರೊಂದಿಗೆ ನಡೆಸಿದ ಸಾಹಿತ್ಯಕ ಸಂವಾದ ಇಲ್ಲಿದೆ.